ಅ) ಪ್ರಸ್ತುತ ಭೂಸ್ವಾಧೀನ ಪ್ರಕ್ರಿಯೆಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಮೂಲಕ ಕೈಗೊಳ್ಳುತ್ತಿದ್ದು, ಭೂ ಸ್ವಾಧೀನಕ್ಕೆ ಅಂತಿಮ ಅಧಿಸೂಚನೆ ಹೊರಡಿಸಿ ಭೂ ಮಾಲೀಕರಿಂದ ಭೂಮಿಯನ್ನು ಪಡೆಯಲಾಗುತ್ತಿದೆ. ಭೂಸ್ವಾಧೀನ ಪೂರ್ಣಗೊಳಿಸಿದ 18 ತಿಂಗಳೊಳಗೆ ಯೋಜನೆಯನ್ನು ಪೂರ್ಣಗೊಳಿಸಲಾಗುವುದು.

ಇ) ರಾಜ್ಯ ಸರ್ಕಾರವು 2002-03ನೇ ಸಾಲಿನ ಆಯವ್ಯಯದಲ್ಲಿ ಒಟ್ಟು ರೂ. 450.00 ಲಕ್ಷಗಳಿಗೆ ಮಂಜೂರಾತಿ ನೀಡಿ ಹಣ ಬಿಡುಗಡೆಯಾಗಿದೆ. ಈ ಯೋಜನೆಗೆ ರಾಜ್ಯದ ಪಾಲಾಗಿ ಒಟ್ಟು ರೂ. 1018.04 ಲಕ್ಷಗಳನ್ನು ಹೂಡಲು ಯೋಜನಾ ವರದಿಯನ್ನು ರೂಪಿಸಲಾಗಿದೆ. ಕೇಂದ್ರದ ಪಾಲಾಗಿ ರೂ. 1700.00 ಲಕ್ಷಗಳನ್ನು ಅನುದಾನ ರೂಪದಲ್ಲಿ ಹಾಗೂ ಉಳಿದ ಮೊತ್ತವನ್ನು (ರೂ. 5.92 ಕೋಟಿ) ಪಾಲುದಾರಿಕೆಯ ಮೂಲಕ ಪಡೆಯಲಾಗುವುದು. ಯೋಜನೆಯ ವೆಚ್ಚ ಒಟ್ಟು ರೂ. 32.97 ಕೋಟಿಗಳಾಗಿರುತ್ತದೆ.

ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ರೇಷ್ಮೆ ಇಲಾಖೆಯ ಜಮೀನುಗಳಲ್ಲಿನ ಕಾರ್ಯಕ್ರಮಗಳು

1118 (510) ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಯಾವ ಯಾವ ಗ್ರಾಮಗಳಲ್ಲಿ ರೇಷ್ಮೆ ಇಲಾಖೆಗೆ ಸಂಬಂಧಪಟ್ಟ ಜಮೀನುಗಳು ಇವೆ, ಎಷ್ಟೆಷ್ಟು ಎಕರೆಗಳು ಇವೆ ?

ಆ) ಈ ಜಮೀನುಗಳಲ್ಲಿ ಇಲಾಖಾವತಿಯಿಂದ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ?

ಇ) ಈ ಕಾರ್ಯಕ್ರಮಗಳಿಂದ ರೈತರಿಗೆ ಆಗಿರುವ ಪ್ರಯೋಜನಗಳೇನು ; (ವಿವರ ನೀಡುವುದು) ?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು) :

ಅ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ದೊಡ್ಡಬಳ್ಳಾಪುರ ರೇಷ್ಮೆ ಕೃಷಿ ಕ್ಷೇತ್ರದ ವಿಸ್ತೀರ್ಣ 26.16 ಎಕರೆ ಮತ್ತು ಕಾಮಾಕ್ಷಿಹಳ್ಳಿಯಲ್ಲಿ 50 ಎಕರೆ ಜಮೀನು ಇಲಾಖೆಯ ವಶದಲ್ಲಿದೆ.

ಆ) ದೊಡ್ಡಬಳ್ಳಾಪುರ ರೇಷ್ಮೆ ಕೃಷಿ ಕ್ಷೇತ್ರದಲ್ಲಿ ರೇಷ್ಮೆ ಕೃಷಿ ಕ್ಷೇತ್ರ, ಬಿತ್ತನೆಕೋಠಿ, ಮಹಿಳಾ ಪ್ರಾತ್ಯಕ್ಷತಾ ಕ್ಷೇತ್ರ, ತಾಂತ್ರಿಕ ಸೇವಾ ಕೇಂದ್ರ ಮತ್ತು ರೇಷ್ಮೆ ಸಹಾಯಕ ನಿರ್ದೇಶಕರ ಕಛೇರಿಗಳು ಕಾರ್ಯ ನಿರ್ವಹಿಸುತ್ತಿವೆ.

ಕಾಮಾಕ್ಷಿ ಹಳ್ಳಿಯಲ್ಲಿ ಹಣದ ಕೊರತೆ ಮತ್ತು ಕಾರ್ಮಿಕರ ಕೊರತೆಯಿಂದ ಯಾವುದೇ ಕಾರ್ಯಕ್ರಮ ಕೈಗೊಂಡಿರುವುದಿಲ್ಲ.

ಇ) 1) ರೇಷ್ಮೆ ಕೃಷಿ ಕ್ಷೇತ್ರದಲ್ಲಿ ಹೊಸ ಹಿಪ್ಪುನೇರಳೆ ತಳಿ ಬೆಳೆಸಿದ್ದು ರೇಷ್ಮೆ ಬೆಳೆಗಾರರು ಈ ತಳಿಯ ಬಗ್ಗೆ ಪ್ರಾತ್ಯಕ್ಷತಾ ವಿವರಗಳನ್ನು ಪಡೆಯಬಹುದು.

2) ಕೃಷಿ ಕ್ಷೇತ್ರ ಬೆಳೆದ ಬಿತ್ತನೆ ಗೂಡಿನಿಂದ ರೇಷ್ಮೆ ಮೊಟ್ಟೆ ಉತ್ಪಾದಿಸಿ ರೈತರಿಗೆ ವಿತರಿಸಲಾಗುತ್ತಿದೆ.

3) ರೇಷ್ಮೆ ಬಿತ್ತನೆ ಕೋಠಿಯಲ್ಲಿ ರೋಗ ರಹಿತ ಮೊಟ್ಟೆಗಳನ್ನು ಉತ್ಪಾದಿಸಿ, ರಿಯಾಯಿತಿ ದರದಲ್ಲಿ ರೇಷ್ಮೆ ಬೆಳೆಗಾರರಿಗೆ ವಿತರಿಸಲಾಗುತ್ತಿದೆ.

4) ಮಹಿಳಾ ಪ್ರಾತ್ಯಕ್ಷತಾ ಕ್ಷೇತ್ರದಲ್ಲಿ ರೈತ ಮಹಿಳೆಯರಿಗೆ ರೇಷ್ಮೆ ಕೃಷಿ ಬಗ್ಗೆ ಪ್ರಾತ್ಯಕ್ಷತಾ ತರಬೇತಿ ಒದಗಿಸಲಾಗುತ್ತಿದೆ.

5) ರೇಷ್ಮೆ ಬೆಳೆಗಾರರಿಗೆ ಹಿಪ್ಪುನೇರಳೆ ವ್ಯವಸಾಯ, ರೇಷ್ಮೆ ಹುಳುಸಾಕಣೆ, ಇಲಾಖೆಯಿಂದ ದೊರೆಯುವ ತರಬೇತಿ, ಸಹಾಯ ಮತ್ತು ಸೌಲಭ್ಯಗಳ ಮಾಹಿತಿಯ ವಿವರಗಳನ್ನು ತಾಂತ್ರಿಕ ಸೇವಾ ಕೇಂದ್ರಗಳ ಸಿಬ್ಬಂದಿ ಒದಗಿಸುತ್ತಾರೆ.

6) ಹೊಸ ತಾಂತ್ರಿಕತೆಗಳ ಅಳವಡಿಕೆಯಿಂದ ಗುಣಮಟ್ಟ, ಉತ್ಪಾದನೆ ಮತ್ತು ಉತ್ಪಾದಕತೆ ಹೆಚ್ಚಿಸಿ, ಉತ್ಪಾದನಾ ವೆಚ್ಚ ಕಡಿಮೆ ಮಾಡುವ ಬಗ್ಗೆ ತಾಂತ್ರಿಕ ಸಿಬ್ಬಂದಿ ಮಾಹಿತಿ ಒದಗಿಸುತ್ತಾರೆ.

ರಾಜ್ಯದಲ್ಲಿ ಮೀನುಗಾರಿಕೆಯಿಂದ ಬಂದ ಆದಾಯ

1119 (511) ಶ್ರೀ ವಿ. ಕೃಷ್ಣಪ್ಪ (ದೊಡ್ಡಬಳ್ಳಾಪುರ) ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ 2001-2002 ಹಾಗೂ 2002-2003ನೇ ಸಾಲುಗಳಲ್ಲಿ ಮೀನುಗಾರಿಕೆಗೆ ಹರಾಜು ಮಾಡಿದ ಕೆರೆಗಳ ಸಂಖ್ಯೆ ಎಷ್ಟು ; ಈ ಕೆರೆಗಳಿಗೆ ಬಿಡಲಾದ ಮೀನು ಮರಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು) ?

ಆ) ಇದರಿಂದ ಸರ್ಕಾರಕ್ಕೆ ಬಂದ ವರ್ಷಾವಾರು ಆದಾಯ ಎಷ್ಟು ?

ಇ) ಈ ಕೆರೆಗಳಲ್ಲಿ ನೀರಿದ್ದ ಹಾಗೂ ನೀರು ಇಲ್ಲದೇ ಇದ್ದವುಗಳೆಷ್ಟು ?

ಈ) ನೀರು ಇಲ್ಲದೇ ಇದ್ದ ಕೆರೆಗಳಲ್ಲಿ ಹರಾಜಾದ ಹಣವನ್ನು ವಾಪಸ್ಸು ಕೊಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು) :

ಅ) ಜಿಲ್ಲಾವಾರು ವಿವರಗಳನ್ನು ಅನುಬಂಧ-I ರಲ್ಲಿ ನೀಡಲಾಗಿದೆ.

ಆ) ವಿವರಗಳನ್ನು ಅನುಬಂಧ-II ರಲ್ಲಿ ನೀಡಲಾಗಿದೆ.

ಇ) ನೀರಿದ್ದ ಕೆರೆಗಳನ್ನು ಮಾತ್ರ ಹರಾಜು ಮೂಲಕ ವಿಲೇವಾರಿ ಮಾಡಲಾಗಿರುತ್ತದೆ.

ಈ) ಹಣ ಮರು ಪಾವತಿಗಾಗಿ ಕೇವಲ ಒಂದೇ ಒಂದು ಅರ್ಜಿಯನ್ನು ಮೀನುಗಾರಿಕಾ ನಿರ್ದೇಶನಾಲಯದಲ್ಲಿ ಸ್ವೀಕರಿಸಲಾಗಿದ್ದು ಅದನ್ನು ಪರಿಶೀಲಿಸಲಾಗುತ್ತಿದೆ.